**2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು**
**S.C. No.**:113/2023

**ಸಾಕ್ಷಿಯನ್ನು ದಿನಾಂಕ 24.09.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಮಾದಮ್ಮ | **ಪಿ.ಡಬ್ಲ್ಯೂ-2** |
| ತಂದೆಯ/**ಗಂಡನ** ಹೆಸರು | : | ಲೇಟ್ ಮಾದೇಗೌಡ | ಸಿ.ಡಬ್ಲ್ಯೂ-3 |
| ವಯಸ್ಸು | : | 80 ವರ್ಷ | |
| ಉದ್ಯೋಗ | : | ಗೃಹಿಣಿ | |
| ವಾಸ ಸ್ಥಳ | : | ಬಡಗಲಹುಂಡಿ ಗ್ರಾಮ | |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

1. ಈ ಪ್ರಕರಣದ 1 ಮತ್ತು 2 ನೇ ಆರೋಪಿತರಾದ ನಂಜೇಗೌಡ ಮತ್ತು ಮಾದೇವ ನನ್ನ ಮಕ್ಕಳಾಗಿರುತ್ತಾರೆ. 3 ನೇ ಆರೋಪಿತರಾದ ಎಂ.ಮಹದೇವ ನನ್ನ ಮಾವನ ಮಗನಿರುತ್ತಾನೆ. ನನಗೆ ಒಟ್ಟು 3 ಜನ ಹೆಣ್ಣು ಮಕ್ಕಳು ಮತ್ತು ಇಬ್ಬರು ಗಂಡು ಮಕ್ಕಳು. ಸಾಕಮ್ಮ ನನ್ನ ಕೊನೆಯ ಮಗಳು ಇರುತ್ತಾಳೆ. ನನ್ನ ಎಲ್ಲಾ ಮಕ್ಕಳ ಮದುವೆಯಾಗಿದೆ. ಸಾಕಮ್ಮನನ್ನು ನಮ್ಮ ಗ್ರಾಮದ ಜವರೇಗೌಡ ಎನ್ನುವವರೊಂದಿಗೆ ಮದುವೆ ಮಾಡಿದ್ದೇವು. ಸಾಕಮ್ಮಳಿಗೆ ರವಿಕುಮಾರ ಎನ್ನುವ ಒಬ್ಬನೇ ಮಗ ಇದ್ದ, ಅವನು ಸಹ 3 ವರ್ಷಗಳ ಹಿಂದೆ ಮರಣ ಹೊಂದಿದ್ದಾನೆ. ಸಾಕಮ್ಮಳ ಗಂಡ ಅವರಿಗೆ

ಮಗ ಹುಟ್ಟಿ ಒಂದು ವರ್ಷಕ್ಕೆ ಮರಣ ಹೊಂದಿದ್ದ. ಸಾಕಮ್ಮನ ಮಗ ರವಿಕುಮಾರ ಮರಣ ಹೊಂದಿದ್ದಾಗ ಆತನಿಗೆ 15 ವರ್ಷ ವಯಸ್ಸಾಗಿತ್ತು. ನನ್ನ ಮಗಳು ಸಾಕಮ್ಮ ನಮ್ಮ ಗ್ರಾಮದಲ್ಲಿಯೇ ಒಂಟಿಯಾಗಿ ವಾಸವಿದ್ದಳು. 3 ವರ್ಷಗಳ ಹಿಂದಿನಿಂದ ಸಾಕಮ್ಮ ಗ್ರಾಮದಲ್ಲಿ ಇಲ್ಲ, ಎಲ್ಲಿ ಹೋಗಿದ್ದಾಳೆ ಎಂದು ನನಗೆ ಗೊತ್ತಿಲ್ಲ. ಸಾಕಮ್ಮ ನಾವು ಕೊಟ್ಟಿದ್ದ ಜಾಗದಲ್ಲಿಯೇ ಮನೆ ಕಟ್ಟಿಕೊಂಡು ವಾಸವಿದ್ದಳು. ಸಾಕಮ್ಮ ಕಾಣೆಯಾಗಿದ್ದ ಬಗ್ಗೆ ನಾನು ದೂರು ಕೊಟ್ಟಿಲ್ಲ. ಈಗ ನನಗೆ ತೋರಿಸುತ್ತಿರುವ ನಿಪಿ-3 ರಿಂದ ನಿಪಿ-6 ಎಂದು ಗುರುತಿಸಿರುವ ಪೋಟೋದಲ್ಲಿ ಕಾಣುವ ಶವ ಯಾರದು ಎಂದು ನನಗೆ ಗೊತ್ತಿಲ್ಲ. 1 ರಿಂದ 3 ನೇ ಆರೋಪಿತರ ಮೇಲೆ ಯಾವ ಕಾರಣಕ್ಕೆ ಪ್ರಕರಣ ದಾಖಲಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ನನ್ನನ್ನು ಮೈಸೂರಿನ ಸರ್ಕಾರಿ ಮೆಡಿಕಲ್ ಕಾಲೇಜಿನ ಶವಗಾರರ ಬಳಿ ಕರೆದುಕೊಂಡು ಹೋಗಿಲ್ಲ ಮತ್ತು ನನಗೆ ಯಾವುದೇ ಶವವನ್ನು ತೋರಿಸಿಲ್ಲ. ಈಗ ನನಗೆ ತೋರಿಸುತ್ತಿರುವ ಪೋಟೋಗಳು ಎಲ್ಲಿ ತೆಗೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಈ ವೇಳೆಗೆ ಸಾಕ್ಷಿದಾರರಿಗೆ ಶವಗಾರರ ಬಳಿ ತೆಗೆದಿದ್ದ ಶವದ ಪೋಟೋಗಳು ಎಂದು ಹೇಳುವ ಎಂಟು ಪೋಟೋಗಳನ್ನು ತೋರಿಸಲಾಗಿದೆ. ಈಗಲೂ ನನ್ನ ಮಗಳು ಸಾಕಮ್ಮ ಎಲ್ಲಿ ಹೋಗಿದ್ದಾಳೆ ಎಂದು ನನಗೆ ಗೊತ್ತಿಲ್ಲ ಮತ್ತು ನಾನು ಆ ಬಗ್ಗೆ ವಿಚಾರಿಸಿಲ್ಲ.ಮೈಸೂರಿನ ಸರ್ಕಾರಿ ಮೆಡಿಕಲ್ ಕಾಲೇಜಿನ ಶವಗಾರರ ಬಳಿ ನನಗೆ ಯಾವುದೇ ಶವವನ್ನು

ತೋರಿಸಿಲ್ಲ ಮತ್ತು ನಾನು ಆ ಶವವನ್ನು ನೋಡಿ ಅದು ನನ್ನ ಮಗಳು ಸಾಕಮ್ಮದು ಎಂದು ಹೇಳಿಕೆ ಕೊಟ್ಟಿಲ್ಲ.

**<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ</u>**

2. ದಿನಾಂಕ 16.11.2022 ರಂದು ನನ್ನನ್ನು ಮೈಸೂರಿನ ಸರ್ಕಾರಿ ಮೆಡಿಕಲ್ ಕಾಲೇಜಿನ ಶವಗಾರರ ಬಳಿ ಕರೆದುಕೊಂಡು ಹೋಗಿ ಈಗ ನನಗೆ ತೋರಿಸುತ್ತಿರುವ ಪೋಟೋಗಳಲ್ಲಿ ಕಾಣುವ ಶವವನ್ನು ನನಗೆ ತೋರಿಸಿದ್ದರು ಎಂದರೆ ಸರಿಯಲ್ಲ. ಆ ಕಾಲಕ್ಕೆ ಆ ಶವದ ಬಲಗೈಯಲ್ಲಿದ್ದ ರವಿಕುಮಾರ ಎಂದು ಅಚ್ಚೆ ಇದ್ದುದನ್ನು ನೋಡಿ ಅದು ನನ್ನ ಮಗಳು ಸಾಕಮ್ಮಳದು ಎಂದು ಗುರುತಿಸಿದ್ದೆ ಎಂದರೆ ಸರಿಯಲ್ಲ. ರವಿಕುಮಾರ ಎನ್ನುವ ಹೆಸರು ಸಾಕಮ್ಮಳ ಮಗನದ್ದು ಎಂದರೆ ನಿಜ. ರವಿಕುಮಾರ ಮರಣ ಹೊಂದಿದ್ದರಿಂದ ಅವರ ಹೆಸರನ್ನೇ ಸಾಕಮ್ಮ ಅಚ್ಚೆ ಹಾಕಿಸಿಕೊಂಡಿದ್ದಳು ಎಂದರೆ ನನಗೆ ಗೊತ್ತಿಲ್ಲ. ನಾನು ಮೊದಲಿನಿಂದ 1 ನೇ ಆರೋಪಿ ನಂಜೇಗೌಡನೊಂದಿಗೆ ವಾಸವಿದ್ದೇನೆ ಎಂದರೆ ನಿಜ. ಸಾಕಮ್ಮಳನ್ನು ಕುರುಬರಳ್ಳಿ ಗ್ರಾಮದ ಜವರೇಗೌಡರವರೊಂದಿಗೆ ಮದುವೆ ಮಾಡಿ ಕೊಟ್ಟಿದೆವು ಎಂದರೆ ನಿಜ. ಮದುವೆಯಾದ 2 ವರ್ಷಗಳ ಬಳಿಕ ಸಾಕಮ್ಮ ಮತ್ತು ಅವಳ ಗಂಡ ನಮ್ಮ ಗ್ರಾಮಕ್ಕೆ ಬಂದು ವಾಸವಿದ್ದರು ಎಂದರೆ ನಿಜ. ಗಂಡ ಮತ್ತು ಮಗ ಮರಣ ಹೊಂದಿದ್ದ ಮೇಲೆ ಸಾಕಮ್ಮ ಒಬ್ಬಳೇ ವಾಸವಿದ್ದಳು ಎಂದರೆ ನಿಜ. ನಾನು ಸಾಕಮ್ಮಳ ಮನೆಗೆ ಆಗಾಗ ಹೋಗಿ ಮಾತನಾಡಿಕೊಂಡು ಬರುತ್ತಿದ್ದೆ ಎಂದರೆ ನಿಜ. ಶವವನ್ನು ನನಗೆ ತೋರಿಸಿದ

10–12 ದಿನಗಳ ಹಿಂದಿನಿಂದ ಸಾಕಮ್ಮ ಕಾಣುತ್ತಿರಲಿಲ್ಲ ಮತ್ತು ಮನೆಗೆ ಬೀಗ ಹಾಕಿತ್ತು ಎಂದರೆ ನನಗೆ ಗೊತ್ತಿಲ್ಲ. ಸಾಕಮ್ಮ ಎಲ್ಲಿಯೋ ಕೂಲಿ ಕೆಲಸಕ್ಕೆ ಹೋಗಿರಬಹುದು ಅಂದುಕೊಂಡು ನಾನು ಸುಮ್ಮನಿದ್ದೆ ಎಂದರೆ ನಿಜ. ದಿ.16.11.2022 ರಂದು ಪೊಲೀಸರು ನನ್ನ ಮಕ್ಕಳಾದ ನಂಜೇಗೌಡ ಮತ್ತು ಮಹದೇವನನ್ನು ದಸ್ತಗಿರಿ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ಕಾಲಕ್ಕೆ ವಿಚಾರಣೆ ಮಾಡಿದ್ದಾಗ ನಂಜೇಗೌಡ ತಾನು ಅಂಗಡಿ ಮಳಿಗೆ ಕಟ್ಟಲು ಬಿಟ್ಟುಕೊಂಡಿರುವ ಜಾಗದ ಕಡೆ ಸಾಕಮ್ಮ ನಂಜೇಗೌಡ ಎಷ್ಟು ಹೇಳಿದ್ದರು ಕೇಳದೆ ತನ್ನ ಮನೆ ಗೋಡೆ ಒಡೆದು ಬಾಗಿಲು ಇಡುತ್ತಿದ್ದರಿಂದ ದಿ.05.11.2022 ರಂದು ನಂಜೇಗೌಡ ಸಾಕಮ್ಮನ ಮನೆಗೆ ಹೋಗಿ ರಾತ್ರಿ 8.30 ಕ್ಕೆ ಸೌದೆ ತುಂಡಿ ಮತ್ತು ಹಾರೆಯಿಂದ ಸಾಕಮ್ಮಳಿಗೆ ಹೊಡೆದು ಕೊಲೆ ಮಾಡಿದ್ದಾನೆ ಎಂದು ಗೊತ್ತಾಗಿತ್ತು ಎಂದರೆ ಸರಿಯಲ್ಲ. ಕೊಲೆ ಮಾಡಿದ ಬಳಿಕ ನಂಜೇಗೌಡ 2 ಮತ್ತು 3 ನೇ ಆರೋಪಿತರ ಸಹಾಯದೊಂದಿಗೆ ಸಾಕಮ್ಮಳ ಶವವನ್ನು ವರುಣಾ ನಾಲೆಗೆ ಬಿಸಾಕಿದ್ದ ಎಂದು ಗೊತ್ತಾಗಿತ್ತು ಎಂದರೆ ಸರಿಯಲ್ಲ. ಶವವನ್ನು ನನಗೆ ತೋರಿಸಿದ್ದಾಗ ನಾನು ಶವದ ಮೈಮೇಲೆ ಇದ್ದ ಸೀರೆ, ರವಿಕೆ, ಲಂಗಾ, ತಾಳೆ ಸರ, ಹಿತ್ತಾಳೆ ಬಳೆಗಳು ಮತ್ತು ಅಚ್ಚೆಯನ್ನು ನೋಡಿ ಅದು ಸಾಕಮ್ಮಳ ಶವ ಎಂದು ಗುರುತಿಸಿದ್ದೆ ಎಂದರೆ ಸರಿಯಲ್ಲ. ಸಾಕಮ್ಮ ಜಮೀನು ಮತ್ತು ಜಾಗದಲ್ಲಿ ತನಗೂ ಪಾಲು ಬೇಕು ಎಂದು ಕೇಳುತ್ತಿದ್ದುದರಿಂದ 1 ಮತ್ತು 2 ನೇ ಆರೋಪಿತರು ಆಗಾಗ ಸಾಕಮ್ಮಳೊಂದಿಗೆ ಜಗಳ ಮಾಡುತ್ತಿದ್ದರು ಮತ್ತು ಸಾಕಮ್ಮ ನಂಜೇಗೌಡನ ಜಾಗದ ಕಡೆ

ಬಾಗಿಲು ಇಡುತ್ತಿದ್ದ ಕಾರಣಕ್ಕೆ ಆಗಾಗ ಜಗಳ ಆಗುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. ಇದೇ ವಿಚಾರಕ್ಕೆ ಸಾಕಮ್ಮ ಶವ ಸಿಗುವ 20 ದಿನಗಳ ಮುಂಚೆ ಪೊಲೀಸರಿಗೆ ದೂರು ನೀಡಿದ್ದಳು ಎಂದರೆ ನನಗೆ ಗೊತ್ತಿಲ್ಲ. ಈ ಬಗ್ಗೆ ನಾನು ಶವ ಪಂಚನಾಮೆ ಕಾಲಕ್ಕೆ ಈ ದಿನ ದಿನಾಂಕ 16.11.2022 ರಂದು..............ವೈದ್ಯಕೀಯ ಪರೀಕ್ಷೆಯನ್ನು ತಿಳಿಯ ಬಯಸುತ್ತೇನೆ ಎಂದು ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಶವಪಂಚನಾಮೆಯನ್ನು **ನಿಪಿ–8** ಎಂದು, ಹೇಳಿಕೆಯನ್ನು **ನಿಪಿ–8 ( ಎ )** ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸುತ್ತಿರುವ ಸೀರೆ, ರವಿಕೆ, ಲಂಗಾ, ಹಿತ್ತಾಳೆ ಮಾದರಿಯ ತಾಳಿ ಮತ್ತು ಚೈನು, ಬೆಳ್ಳಿ ಕಾಲು ಚೈನು, ಹಿತ್ತಾಳೆಯ ಕೈಬಳೆ ಮತ್ತು ಕರಡಿಗೆ ದಾರ ಸಾಕಮ್ಮಳ ಶವದ ಮೇಲೆ ಇದ್ದ ವಸ್ತುಗಳಿವೆ ಎಂದರೆ ಸರಿಯಲ್ಲ. ಆ ಶವ ಸಾಕಮ್ಮಳದು ಎಂದು ಗುರುತಿಸಿದ ಬಳಿಕ ಶವ ಪರೀಕ್ಷೆ ಮಾಡಿ ನಂತರ ಶವವನ್ನು ನನ್ನ ವಶಕ್ಕೆ ಕೊಟ್ಟಿದ್ದರು ಮತ್ತು ನಾನೇ ಶವಸಂಸ್ಕಾರ ಮಾಡಿದ್ದೇನೆ ಎಂದರೆ ಸರಿಯಲ್ಲ. ಈ ದಿನ ನನ್ನನ್ನು ನಂಜೇಗೌಡನ ಹೆಂಡತಿ ಮತ್ತು ಮಗಳು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿದ್ದಾರೆ ಎಂದರೆ ನಿಜ. ಈಗಲೂ ನನ್ನನ್ನು ನಂಜೇಗೌಡನ ಮನೆಯವರೇ ನೋಡಿಕೊಳ್ಳುತ್ತಾರೆ ಎಂದರೆ ನಿಜ. ಅದೇ ಕಾರಣಕ್ಕೆ ಸತ್ಯ ಹೇಳಿದರೇ ನನ್ನ ಮಗನಿಗೆ ತೊಂದರೆಯಾಗುತ್ತದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕಮ್ಮನನ್ನು ನಂಜೇಗೌಡ ಕೊಲೆ ಮಾಡಿದ್ದಾನೆ ಎಂದು ನನಗೆ ಗೊತ್ತಿದ್ದೆ

ಎಂದರೆ ಸರಿಯಲ್ಲ. ಸಾಕಮ್ಮ ಎಲ್ಲಿದ್ದಾಳೆ ಎಂದು ನನಗೆ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿತರ ಪರ **ಶ್ರೀ.ವಿ.ಬಿ.ಎನ್** ವಕೀಲರಿಂದಃ

4. ನಾನು ಮೊದಲಿನಿಂದಲೂ 1 ನೇ ಆರೋಪಿ ನಂಜೇಗೌಡ ಮತ್ತು ಅವರ ಕುಟುಂಬದವರೊಂದಿಗೆ ವಾಸ ಇದ್ದೇನೆ ಎಂದರೆ ನಿಜ. ಸಾಕಮ್ಮ ಅವಳ ಗಂಡ ಮತ್ತು ಮಗ ಮರಣ ಹೊಂದಿದ ಬಳಿಕ ಮೈಸೂರಿಗೆ ಕೂಲಿ ಕೆಲಸಕ್ಕೆ ಹೋಗುತ್ತಿದ್ದಳು ಎಂದರೆ ನಿಜ. ಆ ರೀತಿ ಹೋದವಳು 1–2 ತಿಂಗಳವರೆಗೆ ವಾಪಸ್ಸು ಊರಿಗೆ ಬರುತ್ತಿರಲಿಲ್ಲ ಎಂದರೆ ನಿಜ. ನಾನು ಸಾಕಮ್ಮಳನ್ನು ಎಲ್ಲಿ ಹೋಗುತ್ತಾಳೆ ಎಂದು ವಿಚಾರಿಸುತ್ತಿರಲಿಲ್ಲ ಎಂದರೆ ನಿಜ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ.,

**2 ನೇ ಅಪರ ಜಿಲ್ಲಾ ಮತ್ತು ಸತ್ತ ನ್ಯಾಯಾಧೀಶರು**
**ಮೈಸೂರು**